**1 ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ಟಿ.ನರಸೀಪುರ**

**ದಿನಾಂಕ 18 ನೇ ಜೂನ್ 2026**

**ಸಿ.ಸಿ ಸಂಖ್ಯೆ : 927/2026**

**ಪಿರ್ಯಾದಿ** : ರಾಜ್ಯದ ಪರವಾಗಿ ತಲಕಾಡು ಪೋಲೀಸ್ ಠಾಣೆ,

**ವಿರುದ್ಧ**

**ಆರೋಪಿಗಳು** : ಮಹೇಂದ್ರ ಪ್ರಸಾದ್.ಬಿ.ಎನ್ ಬಿನ್ ನಾಗ, 36 ವರ್ಷ.
ಟಿ.ಬೆಟ್ಟಹಳ್ಳಿ ಗ್ರಾಮ, ಟಿ.ನರಸೀಪುರ ತಾಲ್ಲೂಕು.

**ಆಪಾದನೆ**

**ಶ್ರೀಮತಿ ಎನ್.ನಿವೇದಿತಾ, 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು, ಆರೋಪಿಯಾದ ನಿಮ್ಮ ವಿರುದ್ಧ ಮಾಡುವ ಆರೋಪಣೆ ಏನೆಂದರೆ**

ದಿನಾಂಕಃ 27/08/2025 ರಂದು ಸಂಜೆ 6.40 ಗಂಟೆ ಸಮಯದಲ್ಲಿ ತಲಕಾಡು ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ, ಟಿ.ನರಸೀಪುರ ತಾಲ್ಲೂಕು, ತಲಕಾಡು ಗ್ರಾಮದ, ಶಿವಪಾರ್ವತಿ ಮಂಗಳ ಮಂದಿರಕ್ಕೆ ಹೋಗವ ದಾರಿಯ ಹತ್ತಿರ ದಕ್ಷಿಣೋತ್ತರವಾಗಿ ಹಾದು ಹೋಗಿರುವ ತಲಕಾಡು–ಮುಡುಕುತೊರೆ ಮುಖ್ಯ ರಸ್ತೆಯ ಎಡಭಾಗದಲ್ಲಿ ಚಾಸಾ.2 ರವರು ನಡೆದುಕೊಂಡು ಹೋಗುತ್ತಿದ್ದಾಗ, ಮೇಲ್ಕಂಡ ಆರೋಪಿಯಾದ ನೀವು ಕೆಎ–04–ಕೆಹೆಚ್–2104 ರ ಮೋಟರು ಸೈಕಲ್ ನ ಹಿಂಬದಿಯಲ್ಲಿ ಚಾಸಾ.5 ರವರನ್ನು ಕೂರಿಸಿಕೊಂಡು ಮುಡುಕುತೊರೆ ಕಡೆಯಿಂದ ತಲಕಾಡು ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ, ಚಾಸಾ.2 ರವರಿಗೆ ಡಿಕ್ಕಿ ಮಾಡಿ ಅಪಘಾತವನ್ನುಂಟು ಮಾಡಿದ್ದು, ಆ ಮೂಲಕ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ **281** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದನೆ ಇದೆ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿಯಾದ ನೀವು ಮೇಲ್ಕಂಡ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಚಾಸಾ.2 ರವರಿ ಗೆ ಡಿಕ್ಕಿ ಮಾಡಿದ ಪರಿಣಾಮ, ಚಾಸಾ.2 ರವರು ಕೆಳಕ್ಕೆ ಬಿದ್ದು, ತಲೆ, ಹಣೆಯ ಬಲಭಾಗ, ಬಲಗಾಲು, ಬಲಗಾಲಿನ ಪಾದದ ಬಳಿ ತೀವ್ರ ಸ್ವರೂಪದ ಪೆಟ್ಟಾಗಿದ್ದು, ಆ ಮೂಲಕ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ **125(b)** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರಿ ಎಂದು ಅಪಾದಿಸಲಾಗಿದೆ.

**ಪ್ರಶ್ನೆ**: 1: ಆರೋಪಣೆ ಓದಿ ಹೇಳಿದುದು ಅರ್ಥವಾಯಿತೇ?
**ಉತ್ತರ** : ಅರ್ಥವಾಯಿತು

**ಪ್ರಶ್ನೆ**: 2: ಶಿಕ್ಷೆಗೆ ಒಪ್ಪುತ್ತೀರೋ ಅಥವಾ ನಿಮ್ಮದೇನಾದರೂ ವಿಚಾರಣೆಯಾಬೇಕಾ ?
**ಉತ್ತರ** : ಶಿಕ್ಷೆಗೆ ಒಪ್ಪಿರುತ್ತೇನೆ

ಈ ಮೇಲಿನ ಆಪಾದನೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಿದ ನಂತರ ಅವರು ನೀಡಿದ ಉತ್ತರವನ್ನು ನನ್ನ ಸ್ವಂತ ಬರಹದಲ್ಲಿ ದಾಖಲೆ ಮಾಡಿರುತ್ತೇನೆಂದು ಈ ಮೂಲಕ ದೃಢೀಕರಿಸುತ್ತೇನೆ.

ಓ ಹೇ ಕೇ ಸ ಇ ಓ

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರದನ್ಯಾದಂ., ಟಿ.ನರಸೀಪುರ.**

ಪ್ರಕರಣವನ್ನು ಕರೆಯಲಾಯಿತು. ಆರೋಪಿಯು ಹಾಜರಿದ್ದು ದೋಷಾರೋಪಣಾ ಪತ್ರವನ್ನು ಒದಗಿಸಲಾಯಿತು. ಆರೋಪಣೆಯನ್ನು ಆರೋಪಿಗೆ ಓದಿ ಹೇಳಲಾಗಿ, ಅರ್ಥೈಸಿಕೊಂಡು ತಮ್ಮ ತಪ್ಪನ್ನು ಒಪ್ಪಿಕೊಂಡಿರುಸತ್ತಾರೆ. ಅವರ ತಪ್ಪೊಪ್ಪಿಗೆಯು ಸ್ವ-ಇಚ್ಛೆಯಿಂದ ಕೂಡಿದ್ದೆಂದು ಮನವರಿಕೆಯಾಗಿದೆ.

ಆದ್ದರಿಂದ ಭಾರತೀಯ ನ್ಯಾಯ ಸಂಹಿತೆ ಕಲಂ.281ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಕ್ಕೆ ಆರೋಪಿಗೆ ಶಿಕ್ಷೆ ವಿಧಿಸಿದ್ದು ರೂ.1,000/- ದಂಡವನ್ನು ಪಾವತಿಸತಕ್ಕದ್ದು ಎಂದು ಆದೇಶಿಸಿರುತ್ತೇನೆ.

ಆದ್ದರಿಂದ ಭಾರತೀಯ ದಂಡ ಸಂಹಿತೆ ಕಲಂ.125(**b**)ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಕ್ಕೆ 1 ನೇ ಆರೋಪಿಗೆ ಶಿಕ್ಷೆ ವಿಧಿಸಿದ್ದು ರೂ.5,000/- ದಂಡವನ್ನು ಪಾವತಿಸತಕ್ಕದ್ದು ಎಂದು ಆದೇಶಿಸಿರುತ್ತೇನೆ.

ಪಿ ಎಫ್ ಸಂಖ್ಯೆ.98/2025 ಕ್ಕೆ ಸಂಬಂಧಿಸಿದಂತೆ ಐಟಂ ನಂ.1 ನ್ನು ಅರ್ಜಿದಾರರ ವಶಕ್ಕೆ ನೀಡಲಾಗಿರುತ್ತದೆ.

Call before lok-adalath by 11/07/2026.

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ. ದ. ನ್ಯಾ ದಂ., ಟಿ.ನರಸೀಪುರ.**